# ಕಂಪ್ಯೂಟರ್

ಗುಂಡಿಗಳೊತ್ತೆ ಬಣ್ಣದ ಚಿತ್ರ
ಸಾವಿರ ಸಾವಿರ ಲೆಕ್ಕದ ಪತ್ರ
ಬಗೆ ಬಗೆ ಆಕಾರ ಚಿತ್ರ ಸಂಪತ್ತು
ನಿನ್ನನರಿತು ಬಳಸೆ ಇಲ್ಲ ಆಪತ್ತು

ಆಡಲು ನಮಗೆ ಮಜವನು ನೀಡುತ
ಓದಿರಿ ಎಂದು ಪಾಠವ ಕಲಿಸುತ
ಸುಮಧುರ ಹಾಡ ಒಳಗೆ ಬಿತ್ತುತ
ಕಂಠದಿ ಬಗೆ ಬಗೆ ಸ್ವರಗಳ ತೋರುತ

ನಿನ್ನಯ ಒಡಲಲಿ ಏನೆಲ್ಲ ಉಂಟು
ನನಗೂ ನಿನಗೂ ಬಿಡದ ನಂಟು
ಗಡಿ ಕಾಯುವ ಯೋಧರ ತೋರುವೆ ನೀನು
ನಿನ್ನಲ್ಲೆ ಜಗವನು ಕಾಣುವೆ ನಾನು

ರಂಜನೆ ನೀಡುವೆ ಸೊಬಗನು ತೋರುವೆ
ಬಹು ಜ್ಞಾನಕೆ ನೀ ಕಾರಣವೆ
ವಿಧ ವಿಧ ಭಾಷೆಯ ಕಲಿಸುವೆ ನೀನು
ಮನೆ ಮನದಲಿ ನಿನ್ನಯ ಮಹಿಮೆ ಅದೇನು

ಸಾವಿರ ಮಾಹಿತಿ ನಿನ್ನೊಡಲೊಳಗುಂಟು
ಅರಿಯದು ನಮಗೆ ನಿನ್ನೀ ಗುಟ್ಟು
ಸಾವಿರ ಕೈಗಳ ನೀ ಕಟ್ಟಿರುವೆ
ಮನುಜರ ನೆನಪನು ನೀ ಮೆಟ್ಟಿರುವೆ

**-ಸುಶೀಲಾ ಸೋಮಶೇಖರ್, ಹಾಸನ**



# ಚಾಚಾ ನೆಹರು



ಬಂದರು ಬಂದರು
ಜವಾಹರರು
ಮಕ್ಕಳ ಪ್ರೀತಿಯ
ಚಾಚಾ ನೆಹರು

ಕಚೇರಿಯಿಂದಲೇ
ನೇರ ಬಂದರು
ಕೈಯಲಿ ಅಷ್ಟು
ಬಲೂನು ತಂದರು

ಮಕ್ಕಳಿಗೆಲ್ಲ
ಹಂಚಿಕೊಟ್ಟರು
ಪೆಪ್ಪರಮೆಂಟನು
ಜೊತೆಯಲಿ ಇಟ್ಟರು

ಚಪ್ಪಾಳೆ ತಟ್ಟಿ
ಚಿಣ್ಣರು ಕುಣಿದರು
ಕೇಕೆ ಹಾಕುತ
ನಕ್ಕು ನಲಿದರು

ಪ್ರಧಾನಿ ಗತ್ತು
ಮರೆಯಾಗಿತ್ತು
ನಿಧಾನ ಬಾಲ್ಯ
ಗರಿಬಿಚ್ಚಿತ್ತು

ಕೆಂಪು ಗುಲಾಬಿಯ
ಹೂವನು ತಂದು
ಕಂದು ಕೋಟಿಗೆ
ಸಿಕ್ಕಿಸಲು ಕಂದ

ಕೆಲಸದ ಒತ್ತಡ
ಹಗುರವದಾಯ್ತು
ತೋಟದ ಮಾಲಿಗೆ
ಗದರಿಯಾಯ್ತು

ಎಳೆಯರ ಸಡಗರ
ಸಂಭ್ರಮ ಸವಿಯಲು
ಉದ್ಯಾನ ಹಾದಿಯೇ
ದಿನಚರಿಯಾಯ್ತು

ಹಸಿರಾಗಿದೆ ಸುಂದರ
ಬಾಲ್ಯದ ಕನಸನು
ಮಕ್ಕಳ ದಿನವು
ಜಾರಿಗೆ ಬಂತು

ಅಂದದ ಬಟ್ಟೆಯ
ಧರಿಸಿ ಬಂದು
ಚೆಂದದ ಚಿಟ್ಟೆ ಹಾಗೆ
ನಲಿವ ಮಕ್ಕಳೇ ಸುಂದರ

**-ಚಂದ್ರೇಗೌಡ ನಾರಮ್ನಳ್ಳಿ**